# ದೂರಶಿಕ್ಷಣ ನಿರ್ದೇಶನಾಲಯ

## ಕನ್ನಡ ವಿಶ್ವವಿದ್ಯಾಲಯ, ಹಂಪಿ-೫೮೩೨೭೬

# Directorate of Distance Education

## Kannada University, Hampi-583276

# ಜನಸಾಮಾನ್ಯರಿಗೆ ಉನ್ನತ ಶಿಕ್ಷಣ

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೂರಶಿಕ್ಷಣ ನಿರ್ದೇಶನಾಲಯವು 2019-20ನೇ ಸಾಲಿಗಾಗಿ ಈ ಕೆಳಗಿನ ಕೋರ್ಸ್‌ಗಳಿಗೆ ಅರ್ಹರಿಂದ ಪ್ರವೇಶ ಅರ್ಜಿ ಆಹ್ವಾನಿಸಲಾಗಿದೆ.

**2.3 ಸ್ನಾತಕೋತ್ತರ ಕಾರ್ಯಕ್ರಮ ಅಡಿಯಲ್ಲಿಯ ಶಿಕ್ಷಣಕ್ರಮಗಳು**

| ಕ್ರ ಸಂ | ಶಿಕ್ಷಣಕ್ರಮ | ಕೋಡ್ ಸಂಖ್ಯೆ |
|---|---|---|
| 1. | ಎಂ.ಎ. ಕನ್ನಡ | 17 |
| 2. | ಎಂ.ಎ. ಚರಿತ್ರೆ | 25 |
| **3.** | **ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ** | **26** |
| 4. | ಎಂ.ಎ. ಸಮಾಜಶಾಸ್ತ್ರ | 28 |

**2.3.1 ಶಿಕ್ಷಣದ ಅವಧಿ**

ಯಾವುದೇ ಸ್ನಾತಕೋತ್ತರ ಶಿಕ್ಷಣವನ್ನು ಪೂರ್ಣಗೊಳಿಸಲು ಇರುವ ಕನಿಷ್ಠ ಅವಧಿ ಎರಡು ವರ್ಷಗಳು. ಗರಿಷ್ಠ ಅವಧಿ ನಿರ್ದಿಷ್ಟ ಶಿಕ್ಷಣಕ್ಕೆ ಸೇರಿದ ವರ್ಷದಿಂದ ನಾಲ್ಕು ವರ್ಷಗಳು ಮಾತ್ರ. ನಾಲ್ಕು ವರ್ಷಗಳ ಒಳಗೆ ಎಂ.ಎ. ಶಿಕ್ಷಣವನ್ನು ಪೂರ್ಣಗೊಳಿಸದ ಅಭ್ಯರ್ಥಿ ಮತ್ತೆ ಹೊಸದಾಗಿ ಪ್ರವೇಶ ಪಡೆಯಬೇಕಾಗುತ್ತದೆ.

**2.3.2 ಪ್ರವೇಶ ಶುಲ್ಕ ***

ರೂ.ಗಳಲ್ಲಿ

| ನಿಯಮ-1 ಮತ್ತು 2 | ಎಂ.ಎ.ಕನ್ನಡ ಪ್ರಥಮ | ಎಂ.ಎ. ಕನ್ನಡ ಅಂತಿಮ |
|---|---|---|
| ನೋಂದಣಿ ಶುಲ್ಕ – | 1,000/- | 1,000/- |
| ಪ್ರವೇಶ ಶುಲ್ಕ | 2,000/- | .2,000/- |
| ಕಲಿಕಾ ಸಾಮಗ್ರಿ ಶುಲ್ಕ | 3,500/- | 3,500/- |
| ಕೋರ್ಸ್/ಬೋಧನಾ ಶುಲ್ಕ | 2,500/- | 2,500/- |
| ಪ್ರಯೋಗ ಶುಲ್ಕ | 1,000/- | 1,000/- |
| ಎಂಪಿಪಿ ಶುಲ್ಕ (ನಿಯಮ-1ಕ್ಕೆ) (ಎಂಪಿಪಿ ವಿದ್ಯಾರ್ಥಿಗಳಿಗೆ ಮಾತ್ರ) | 500/- | - |
| ಪರೀಕ್ಷಾ ಶುಲ್ಕ | 1,000/- | 1,000/- |
| ಹೊರ ರಾಜ್ಯದ ಪದವೀಧರರ ಅರ್ಹತಾ ಶುಲ್ಕ (ಹೊರರಾಜ್ಯದವರಿಗೆ ಮಾತ್ರ) | 5,000/- | - |
| **ಒಟ್ಟು ಮೊತ್ತ** | **16,500/-** | **11,000/-** |

*** ಪ್ರವೇಶ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಹಿಂದುಳಿದ, ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಎಸ್.ಎಸ್.ಪಿ. ಶಿಷ್ಯವೇತನ ಪೋರ್ಟಲ್ ತಂತ್ರಾಂಶದ ಮೂಲಕ ಶುಲ್ಕ ಮರುಪಾವತಿ ಪಡೆಯಲು ಮತ್ತು ವಿಕಲಾಂಗ ಚೇತನ ವಿದ್ಯಾರ್ಥಿಗಳು ಸಂಬಂಧಪಟ್ಟ ಇಲಾಖೆಯ ನಿಯಮಗಳಂತೆ ಶುಲ್ಕ ಮರುಪಾವತಿ ಪಡೆಯಲು ಅವಕಾಶವಿರುತ್ತದೆ.**

**2.3.3 ಪರೀಕ್ಷಾ ಶುಲ್ಕ**

ರೂ.ಗಳಲ್ಲಿ

| ವಿವರಗಳು | ಪ್ರಥಮ ವರ್ಷ | ಅಂತಿಮ ವರ್ಷ |
|---|---|---|
| ಎಲ್ಲಾ ಕೋರ್ಸ್‌ನ ಎಲ್ಲಾ ಪತ್ರಿಕೆಗಳಿಗೆ | 1000/- | 1000/- |
| ಒಂದು ಕೋರ್ಸ್‌ನ ಒಂದು ಪತ್ರಿಕೆಗೆ | .200/- | 200/- |
| ಪುನರ್ ಪರೀಕ್ಷೆ ಒಂದು ಕೋರ್ಸ್‌ನ ಒಂದು ಪತ್ರಿಕೆಗೆ | 200/- | .200/- |

**2.3.4 ಅಂತಿಮ ಎಂ.ಎ. ಗೆ ಪ್ರವೇಶಾತಿ**

ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣದಲ್ಲಿ ಪ್ರಥಮ ಎಂ.ಎ. ಶಿಕ್ಷಣಕ್ರಮವನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಅಂತಿಮ ವರ್ಷದ ಎಂ.ಎ. ಶಿಕ್ಷಣಕ್ರಮಕ್ಕೆ ಹೊಸತಾಗಿ ವಿವರಣಾ ಪುಸ್ತಕ ಖರೀದಿಸಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಕನ್ನಡ ವಿಶ್ವವಿದ್ಯಾಲಯದ ದೂರಶಿಕ್ಷಣ ಮತ್ತು ಅದರ ಅಧ್ಯಯನ ಕೇಂದ್ರಗಳು ಕಳುಹಿಸುವ ಸುತ್ತೋಲೆ/ಸೂಚನೆಗಳನ್ನು ಪಡೆದ ಮೇಲೆ ಈಗ್ಗೆ ನಿಗದಿಪಡಿಸಿದ ಶಿಕ್ಷಣಕ್ರಮದ ಶುಲ್ಕವನ್ನು ಪಾವತಿಸುವುದು. ಪ್ರಥಮ ವರ್ಷದ ಪರೀಕ್ಷೆ ತೆಗೆದುಕೊಳ್ಳದಿರಬಹುದು ಅಥವಾ ಪರೀಕ್ಷೆ ತೆಗೆದುಕೊಂಡು ಅನುತ್ತೀರ್ಣರಾಗಿರಬಹುದು, ಅವರೂ ಅಂತಿಮ ವರ್ಷಕ್ಕೆ ಪ್ರವೇಶ ಪಡೆದು ವ್ಯಾಸಂಗವನ್ನು ಮುಂದುವರಿಸಬಹುದು.

**2.3.5 ಪ್ರವೇಶಾರ್ಹತೆ**

ಎಂ.ಎ. ಪದವಿ ಶಿಕ್ಷಣಕ್ರಮಕ್ಕೆ **ನಿಯಮ-1** ಮತ್ತು **ನಿಯಮ-2** ಎಂಬ ಎರಡು ನಿಯಮಗಳಡಿಯಲ್ಲಿ ಪ್ರವೇಶಾತಿಯನ್ನು ಮಾಡಿಕೊಳ್ಳಲಾಗುತ್ತದೆ.

**ನಿಯಮ-1 ಕನಿಷ್ಠ ಮೂರು ವರ್ಷಗಳ ಅವಧಿಯ ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಬ್ಯಾಚುಲರ್ಸ್ ಪದವಿ ಪಡೆದವರು.**

ಕನಿಷ್ಠ ಮೂರು ವರ್ಷಗಳ ಅವಧಿಯ ಯಾವುದೇ ಪದವಿ (ಬ್ಯಾಚುಲರ್ಸ್ ಡಿಗ್ರಿ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಎಂ.ಎ. ಶಿಕ್ಷಣಕ್ರಮಕ್ಕೆ ನಿಗದಿಪಡಿಸಿದ ವಿಷಯಗಳನ್ನು (Cognate Subjects) **ವ್ಯಾಸಂಗ ಮಾಡದಿದ್ದಲ್ಲಿ** ಅಂತಹ ಅಭ್ಯರ್ಥಿಗಳು ನಿಯಮ-1ರ ಅಡಿಯಲ್ಲಿ, ಯಾವುದೇ ಎಂ.ಎ. ಶಿಕ್ಷಣಕ್ರಮಕ್ಕೆ ಪ್ರವೇಶಾತಿ ಪಡೆಯಬಹುದು. ಆದರೆ, ಇವರು ಕನ್ನಡ ವಿಶ್ವವಿದ್ಯಾಲಯದಲ್ಲಿ ದೂರಶಿಕ್ಷಣ ನಿರ್ದೇಶನಾಲಯವು ನಡೆಸುವ ಸಂಬಂಧಪಟ್ಟ ಶಿಕ್ಷಣಕ್ರಮಗಳ ಸ್ನಾತಕೋತ್ತರ ಪ್ರವೇಶ ಪೂರ್ವಸಿದ್ಧತಾ (Master Preparatory Programme) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು.